ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, the 22nd February, 1973/Phalguna 3, 1894 S.E.

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

ಅಧ್ಯಕ್ಷರು.—ಮಾನ್ಯ ರಾಮಯ್ಯನವರ ಪ್ರಶ್ನೆ ನಂ. 165 ಮತ್ತು 168ನ್ನು ಶ್ರೀ ಬಿ. ಸತ್ಯ ನಾರಾಯಣ್ ಸಿಂಗ್ ಅವರು ಹಾಕಬಹುದು.

N.R.W.S. Schems for Siruguppa Taluk

165. Sri B. SATYANARAYANA SINGHA (Hospet) [On behalf of [SRI B. E. RAMAIAH (Siruguppa)].—

Will the Minister for Community Development and Social Welfare be pleased to state :—

(*a*) the total numb-r of National Rural Water Supply Schemes proposed for Siruguppa Taluk since 1967 ;

(*b*) the estimated cost of each of such National Water Supply Scheme (the details of those schemes may be given) ;

(*c*) the number of schemes so far taken up and completed ;

(*d*) the number of schemes proposed and not taken up and the reasons therefor ?

Sri M. MALLIKARJUNA SWAMY (Minister for Community Development and Social Welfare).—

(*a*) Two.

(SRI M. MALLIKARJUNASWAMY)

(*b*) —

	Estimated cost Rs.
(i) Water Supply scheme to Tallur	1,15,000
(ii) Water Supply scheme to Tekkalakote.	4,34,200

(*c*) One work is taken up and is in progress.

(*d*) (i) One.

(ii) Since the panchayat concerned did not pay the 10 per cent contribution required, the scheme could not be sanctioned and executed.

ಅಧ್ಯಕ್ಷರು.—ಮಾನ್ಯಶ್ರೀ ಬಿ. ಇ. ರಾಮಾಯ್ಯನವರ ಪ್ರಶ್ನೆ ನಂ. 165 ಮತ್ತು ನಂ.168ನ್ನು ಶ್ರೀ ಬಿ. ಸತ್ಯನಾರಾಯಣ ಸಿಂಗ್ ಅವರು ಹಾಕಬಹುದು.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—(ಸಿ) ಗೆ ಉತ್ತರವಾಗಿ ಆ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಹೇಳಿದೆ. ಅದು ಪೂರ್ಣಕೆಯಾಗುವುದಕ್ಕೆ ಇನ್ನೆಷ್ಟು ಕಾಲವಾಗುತ್ತದೆಂಬುದನ್ನು ತಿಳಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಲ್ಲಿ ಒಂದು ಒವರ್ ಹೆಡ್ ಟ್ಯಾಂಕನ್ನು ಕಟ್ಟಬೇಕಾಗಿದೆ. ಅವಕ್ಕಾಗಿ ಟೆಂಡರ್ ಕಾರ್ಪಾರ್ ಮಾಡಿದ್ದರೂ ಇವುವರೆಗೆ ಯಾರು ಮುಂದೆ ಬರಲಿಲ್ಲ. ಆದ್ದರಿಂದ ಈ ಕಾಮಗಾರಿಯನ್ನು ಡಿಪಾರ್ಟ್‌ಮೆಂಟಲ್ ಆಗಿ ಎಗ್ಜಿಕ್ಯೂಟ್ ಮಾಡಿ ಆದಷ್ಟು ಜಾಗ್ರತೆಯಾಗಿ ಪೂರ್ಣಗೊಳಿಸಲಾಗುತ್ತದೆ.

ಅಧ್ಯಕ್ಷರು.—ಪ್ರಶ್ನೆ ನಂ. 166 ಸಹ ಶ್ರೀ ಸತ್ಯನಾರಾಯಣ ಸಿಂಗ್ ಅವರೇ ಹಾಕಬಹುದು.

Vijayanagar Steel Plant at Toranagal

166. **Sri B. SATYANARAYANA SINGH** (Hospet) [On behalf of SRI B. E. RAMAIAH (Siruguppa)]:

Will the Minister for Industries be pleased to state:—

Whether the Government has taken steps to press the Government of India to start the work of the Vijayanagar Steel Plant at Toranagal in Bellary District immediately and in all earnestness?

Sri S. M. KRISHNA (Minister for Industries).—

Yes.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಕೇಂದ್ರ ಸರ್ಕಾರದವರನ್ನು ಇದರ ಬಗ್ಗೆ ಒತ್ತಾಯ ಪಡಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ತಾವು ತೆಗೆದುಕೊಂಡಿರುವ ಕ್ರಮ ಏನು?